ಮುಂದಿನ ಆಲೋಚನೆ ಇಟ್ಟುಕೊಂಡು ನಾವು ಮಾಡಬೇಕಾಗಿದೆ. ನಾಳೆ ಇನ್ನೊಬ್ಬರು ಬಂದಾಗ ಅದು misuse ಆಗುವ ಪರಿಸ್ಥಿತಿ ಬಂದರೆ? ಇಲ್ಲ, ನಾವು ಹಾಗೆ ಮಾಡುವುದಿಲ್ಲ, ರಾಜಕೀಕರಣ ಮಾಡುವುದಿಲ್ಲ, ಅಧಿಕಾರವನ್ನು ಪಾರದರ್ಶಕವಾಗಿ ನಡೆಸುತ್ತೇವೆ ಅಂತ ಹೇಳಿ ನೀವು ಹಂಗೇ ನಡೆಸಬಹುದು. ಇದನ್ನು ನೀವು ಚಿಂತನೆ ಮಾಡಬೇಕಾದ್ದು ಅಗತ್ಯವೆಂದು ಹೇಳಿ, ನನ್ನನ್ನು ಕೂಡ ಬೆಂಗಳೂರು ವಿವಿಯ ಸೆನೆಟ್ ಮೆಂಬರಾಗಿ ಈ ಮನೆಯಿಂದಲೇ ಹಾಕಿದ್ದಾರೆ. ನಾನು ಒಂದು ಸಭೆಗೆ ಹೋಗಿದ್ದೆ, ಆಮೇಲೆ ಹೋಗಲಿಲ್ಲ. ಕಾರಣಗಳು ಬೇರೆ ಇರಬಹುದು. ಚುನಾಯಿತ ಪ್ರತಿನಿಧಿಗಳು ಎಲ್ಲದರಲ್ಲೂ ಇರಬೇಕಾಗುತ್ತದೆ. ಅದನ್ನು ಅಷ್ಟಹಾಕುವುದು ಬೇಡವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

8. ಪ್ರಕಟಣೆ

ಅಧ್ಯಕ್ಷರು :— ಈಗೊಂದು ಪ್ರಕಟಣೆ. ಮಾನ್ಯ ಸಭಾಪತಿಗಳಿಂದ ಈ ಕೆಳಕಂಡ ಸಂದೇಶ ಬಂದಿದೆ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 11ರ ಮೇರೆಗೆ ಕರ್ನಾಟಕ ವಿಧಾನಪರಿಷತ್ತು ದಿನಾಂಕ 24-11-2000ದಂದು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ವಿಧೇಯಕ-2000 ಅನ್ನು ಯಾವುದೇ ತಿದ್ದುಪಡಿ ಇಲ್ಲದೆ ಅನುಮೋದಿಸಲಾಗಿದೆ ಎಂದು ತಿಳಿಸಿರುತ್ತಾರೆ.

9. ಶಾಸನ ರಚನೆ

ಪರ್ಯಾಲೋಚನಾ ಪ್ರಸ್ತಾಪ

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ, 2000 (ಮುಂದು)

+ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಅಧ್ಯಕ್ಷರೇ ಪ್ರಚಲಿತ ನನ್ನ ಮನಃನಲ್ಲಿರುವ ಸಮಸ್ಯೆಯನ್ನು ತಮ್ಮ ಮುಂದಿಡಲು ಇಚ್ಛಿಸುತ್ತೇನೆ. ಇವತ್ತು ಬೆಳಿಗಿನಿಂದ ಪಾರದರ್ಶಕತೆ ಬಗ್ಗೆ ಅಕೌಂಟಿಬ್ಲಿಟಿ ಬಗ್ಗೆ ಅತ್ಯುತ್ತಮ ಬಿಲ್‌ಗಳು ಬಂದವು. ಅವುಗಳನ್ನು ವೋಟಿಗೆ ಹಾಕುವ ಸಂದರ್ಭದಲ್ಲಿ ನಮ್ಮ ಸದಸ್ಯರೆಲ್ಲರೂ ಸರ್ವಾನುಮತ ಎಂಬ ಶಬ್ದ ಉಲ್ಲೇಖ ಮಾಡಿದರು. ಅವೆಲ್ಲ ಸರ್ವಾನುಮತದಿಂದ ಪಾಸಾಗಲಿ ಎಂಬ ಅಭಿಪ್ರಾಯ ಅವರದು. ಆದರೆ ಡಾ: ಪರಮೇಶ್ವರ ಬಗ್ಗೆ ನಮಗೆ ಸಾಕಷ್ಟು ಗೌರವವಿದೆ. ತಾವು ಇಂತಹ ಬಿಲ್ ತರುತ್ತೀರೆಂಬುದು ನಮಗೆ ನಿಜವಾಗೂ ಆಘಾತ ತಂದಿದೆ. ಈಗಾಗಲೇ ವರ್ಷದ ಮಧ್ಯಾವಧಿಯಲ್ಲಿ ಕಾಲೇಜು ಫೀಸನ್ನು 360 ಇದ್ದದನ್ನು 560ಕ್ಕೆ ಏರಿಸಿದಿರಿ. ಹಾಗೂ ಖಾಸಗಿ ಕಾಲೇಜುಗಳು ಇದನ್ನು ಡಬಲ್ ಮಾಡುವಂತಹ ಪ್ರಾವಿಸನ್ನೂ ಮಾಡಿದಿರಿ. ವಿದ್ಯಾರ್ಥಿವ್ಯಂದ ರಾಜ್ಯಾದ್ಯಂತ ಜಿಲ್ಲಾಧಿಕಾರಿಗಳಿಗೆ ಮನವಿ ಕೊಡುವುದು, ಧರಣಿ, ಮುಷ್ಕರ ಎಲ್ಲಿತನಕ ಅಂದರೆ ನೇರವಾಗಿ ಸಚಿವರಿಗೆ ಛೇರಾವ್ ಹಾಕುವುದು ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ಎಬಿವಿಪಿ ಇಂದ ಬೆಂಗಳೂರು ಚಲೊ ಎಂಬ ಕಾರ್ಯಕ್ರಮ ನಡೆದಿತ್ತು. ಸಹಸ್ರಾರು ವಿದ್ಯಾರ್ಥಿಗಳು ಬಂದಿದ್ದರು. ಮುಖ್ಯಮಂತ್ರಿಗಳನ್ನು ಭೇಟಿಯಾಗಿ

ಒಂದು ತಿಂಗಳಲ್ಲಿ ಇದರ ಬಗ್ಗೆ ಪುನರ್ ವಿಮರ್ಶೆ ಮಾಡುತ್ತೇನೆ ಎನ್ನುವ ಆಶ್ವಾಸನೆಯನ್ನು ಪಡೆದಿದ್ದರು. ಇವತ್ತಿನ ತನಕವೂ ಏನೂ ಆಗಿಲ್ಲ. ಈ ರೀತಿ ವಿದ್ಯಾರ್ಥಿಗಳಲ್ಲಿ, ಒಂದು ಕಡೆ ಆಕ್ರೋಶ, ಎರಡನೆಯದು ಜನಪ್ರತಿನಿಧಿಗಳಲ್ಲಿ ಕೂಡ ಒಂದು ಆಕ್ರೋಶದ ಭಾವನೆ ತರುವಂಥ ಬಿಲ್ ಇದಾಗಿದೆ ಎಂದು ಹೇಳುವಂಥದ್ದು. ಇದರಲ್ಲಿ ಕೆಲವು ಉತ್ತಮ ಅಂಶಗಳಿದ್ದರೂ ಕೂಡ ಈ ಒಂದು ಅಂಶ ಸೆನೆಟ್ಟಿಗೆ ಸಂಬಂಧಪಟ್ಟ ಬಗ್ಗೆ ನಾನು ಮಾತನಾಡುವುದಕ್ಕೆ ಇಚ್ಛಿಸಿದ್ದೇನೆ. ತಾವೇನು ಹೇಳಿದಿರಿ ಅಕಾಡೆಮಿಕ್ ಕೌನ್ಸಿಲ್‌ನಲ್ಲಿ, ಸಿಂಡಿಕೇಟ್‌ನಲ್ಲಿ, ಮತ್ತೆ ಸೆನೆಟ್‌ನಲ್ಲಿ ಒಂದೇ ವಿಷಯ ಚರ್ಚೆಯಾಗುತ್ತೆ ಎಂದು ಹೇಳುವ ಮಾತನ್ನು ಕೂಡ ತಾವು ಹೇಳಿದಿರಿ. ಇಲ್ಲಿ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಕೂಡ ಒಂದೇ ವಿಷಯದ ಬಗ್ಗೆ ಸಾಕಷ್ಟು ಚರ್ಚೆಗಳು ನಡೆಯುತ್ತೆ. ಅಂಥ ಸಂದರ್ಭದಲ್ಲಿ ವಿಧಾನ ಪರಿಷತ್ತು ಇರ್ರೆಲೆವೆಂಟ್ ಎಂದು ಹೇಳುವುದಾ? ಖಂಡಿತಾ ಅದು ಆಗಬಾರದು. ಎರಡನೆಯದು ತಾವೇನು ಹೇಳಿದಿರಿ, ಭಾಗವಹಿಸಿದಂಥ ಸಂಖ್ಯೆ ಬಗ್ಗೆ ಚರ್ಚೆಯ ತಾವು ಹೇಳಿದಿರಿ, ಸಂದರ್ಭದಲ್ಲಿ ಐದಾರು ಜನ ಅಥವಾ ಏಳೆಂಟು ಜನರು ಅಷ್ಟು ಮಾತ್ರ ಸಕ್ರೀಯವಾಗಿ ಭಾಗವಹಿಸುತ್ತಾರೆ. ಉಳಿದವರು ಯಾರು ಭಾಗವಹಿಸುವುದಿಲ್ಲ ಎನ್ನುವ ಅರ್ಥದಲ್ಲಿ ನಮಗೆ ಸೆನೆಟ್ ಬೇಕೆ ಎನ್ನುವ ಮಾತನ್ನು ಹೇಳಿದಿರಿ. ನಮ್ಮ ವಿಧಾನ ಸಭೆಯ ಅಧಿವೇಶನವನ್ನು ನೋಡುತ್ತಿರುವಾಗ ಬಹುಶಃ ಪ್ರತಿ ದಿವಸ ಅವ್ರೇಜ್ 30 ಜನ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಅಂಥ ಸಂದರ್ಭದಲ್ಲಿ 224 ಜನ ಸದಸ್ಯರೇಕೆ, ನಮಗೆ 30 ಜನ ಸಾಕು, ಈ ರೀತಿ ಚಿಂತನೆ ಸರಿಯಲ್ಲ ಎನ್ನುವಂಥ ದೃಷ್ಟಿಯಿಂದಷ್ಟೇ ನಾನು ಹೇಳುತ್ತಿದ್ದೇನೆ. ಸೆನೆಟ್ ಸದಸ್ಯರ ಬಗ್ಗೆ ಚುನಾವಣೆ ಸಂಗತಿ ಕೂಡ ಉಲ್ಲೇಖವಾಯಿತು. ಬಹುಶಃ ವಿಧಾನ ಸಭೆಗಷ್ಟೇ ನಾನು ಹೇಳುತ್ತಿಲ್ಲ. ಇದಕ್ಕೆ ಸಂಬಂಧಪಟ್ಟ ತಾಲ್ಲೂಕು ಪಂಚಾಯಿತಿ, ಜಿಲ್ಲಾ ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಇರಬಹುದು. ಎಲ್ಲಾ ಹಂತಗಳಲ್ಲಿ ಕೋ-ಆಪರೇಟಿವ್ ಸೊಸೈಟಿಗೆ ಸಂಬಂಧಪಟ್ಟ ಚುನಾವಣೆ ಸಮೇತ ಯಾವ ರೀತಿ ಹೋರಾಟಕರ, ಕ್ಲಿಷ್ಟಕರ ಪರಿಸ್ಥಿತಿಯಲ್ಲಿದೆ, ಯಾವ ರೀತಿ ಸಂಘರ್ಷಮಯ ವಾತಾವರಣದಲ್ಲಿ ಕೂಡ ಇವತ್ತು ನಡೆಯುತ್ತಿದೆ. ಅದು ಪ್ರಜಾಪ್ರಭುತ್ವದ ಒಂದು ಅಂಗವಾಗಿಬಿಟ್ಟಿದೆ. ಇಂಥ ಸಂದರ್ಭದಲ್ಲಿ ಚುನಾವಣೆಯನ್ನೇ ಬೇಡ ಎಂದು ಹೇಳುವುದು ಪ್ರತ್ಯಕ್ಷವಲ್ಲದಿದ್ದರೂ ಅಪ್ರತ್ಯಕ್ಷವಾಗಿ ರಾಜಕೀಯ ಇದರಲ್ಲಿ ಬಂದೇ ಬರುತ್ತದೆ ಎಂದು ಹೇಳುವಂಥದ್ದು. ಕೋ-ಆಪರೇಟಿವ್ ಸೊಸೈಟಿಗಳಲ್ಲಿ ರಾಜಕೀಯವಾಗಿ ನೇರ ಇಲ್ಲ. ಆದರೂ ಕೂಡ ಖಂಡಿತಾ ಗೊತ್ತೇ ಇರುತ್ತೆ. ಇಂಥ ಇಂಥ ಪಕ್ಷದವರೇ ಇಂಥ ಇಂಥ ಕ್ಯಾಂಡಿಡೇಟ್‌ಗಳನ್ನು ಬೆಂಬಲಿಸುತ್ತಾರೆನ್ನುವ ನಿಟ್ಟಿನಲ್ಲಿ ಈ ತರಹ ಇರುವ ಚುನಾವಣಾ ಪದ್ಧತಿ ಇರುವಾಗ ನಾನು ಬಹುಶಃ ಸೆನೆಟ್ಟಿಗೆ ಸಂಬಂಧಪಟ್ಟಹಾಗೆ ಹೇಳುತ್ತೇನೆ. ನಾನು ಬೇರೆ ಬೇರೆ ಸ್ಥರಗಳಲ್ಲಿ ಕೆಲಸ ಮಾಡಿರುವುದರಿಂದ ವೈಸ್ ಛಾನ್ಸಲರ್ ಅವರೇ ವಿಚಾರವನ್ನು ತೆಗೆದುಕೊಂಡು ಅಧ್ಯಕ್ಷಸ್ಥಾನವನ್ನು ವಹಿಸುತ್ತಾರೆ. ಅವರನ್ನು ಪ್ರಶ್ನಿಸುವಂಥದ್ದು ಏನಾದರೂ ಇದ್ದರೆ ಕೇವಲ ಸೆನೆಟ್ ಸಭೆಯಲ್ಲಿ ಹೆಚ್ಚು ಆಗುತ್ತೆ ಎಂದು ಹೇಳುವಂಥದ್ದು. ಅನೇಕ ಕ್ಲಿಷ್ಟಕರ ಸಂಗತಿಗಳು ಲೋಪದೋಷಗಳ ಬಗ್ಗೆ ಮುಕ್ತವಾಗಿ ಅಲ್ಲಿ ಚಿಂತನೆ

ನಡೆಯುತ್ತದೆ, ಚರ್ಚೆ ನಡೆಯುತ್ತೆ, ಚರ್ಚೆ ನಡೆದು ಅವರ ಅಕೌಂಟಿಬಿಲಿಟಿ ತರುವುದು ಆ ಪ್ರಯತ್ನ ಎಲ್ಲಿಯಾದರೂ ಆಗುವುದಿದ್ದರೆ ಅದು ಸೆನೆಟ್ ಮೂಲಕ ಮಾತ್ರ ಆಗುತ್ತಿದೆ. ತಾವು ಸಿಂಡಿಕೇಟ್ ಬಗ್ಗೆ ಉಲ್ಲೇಖ ಮಾಡಿದಿರಿ. ಅದನ್ನು ವಿಧೇಯಕದಲ್ಲಿ ನೋಡಿದರೆ ಸಿಂಡಿಕೇಟ್ ಸದಸ್ಯರನ್ನು ಮಾಡುವಂಥದ್ದು, ಇದರಲ್ಲಿ ಈ ರೀತಿ ವಿಮರ್ಶೆ ಮಾಡಿ ನೋಡಿದರೆ ಹಣಕಾಸಿನ ವ್ಯವಸ್ಥೆ ಯಾರಿಗೆ ಬರುತ್ತೆ ಎಂದು ಹೇಳಿದರೆ ಅಪರೋಕ್ಷವಾಗಿ ಫೈನ್ಸ್ ಫಾಕಲ್ಟಿಲರ್ ಯಾರಿದ್ದಾರೆ, ಅವರೇ ತಮಗೆ ಬೇಕಾದವರನ್ನೆಲ್ಲಾ ಸೇರಿಸಿಕೊಳ್ಳುವ ಒಂದು ಪ್ರಾವಿಷನನ್ನು ಇದರಲ್ಲಿ ಇಟ್ಟುಕೊಂಡಿದ್ದಾರೆ. ಎಲ್ಲಾ ಕೌನ್ಸಿಲ್‌ಗಳನ್ನು ಮಾತ್ರ ಸಮಿತಿಯಲ್ಲಿ ಸೇರಿಸಿ ಫೈನ್ಸ್ ಫಾಕಲ್ಟಿಲರ್ ಏನು ಹೇಳುತ್ತಾರೆ, ಎಲ್ಲವೂ ಓಕೆ, ಎಸ್, ಎಂದು ಹೇಳಿಕೊಂಡು ಪಾಸ್ ಮಾಡುವ ಒಂದು ವ್ಯವಸ್ಥೆ. ಆದೇನು ಆಗುತ್ತಿದೆಯೋ ಏನೋ ಎಂಬ ನಮಗೆ ಕಾಣುತ್ತಿದೆ. ಈ ನಿಟ್ಟಿನಲ್ಲಿ ತಾವೇನು ಸೆನೆಟ್ ಬಗ್ಗೆ ಯೋಚನೆ ಮಾಡುತ್ತಿದ್ದೀರಿ, ಅದು ಸರಿಯಲ್ಲ, ಜನತೆಯ ಬೇರೆ ಬೇರೆ ಸ್ತರಗಳಲ್ಲಿ, ಬಾ ಫ್ಯಾಕಲ್ಟಿ ಇರಬಹುದು, ಇಂಜಿನಿಯರಿಂಗ್ ಫ್ಯಾಕಲ್ಟಿ ಇರಬಹುದು, ಪರಿಣಿತರು ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಇರಬಹುದು, ಬೇರೆ ಬೇರೆ ಫ್ಯಾಕಲ್ಟಿಗಳು ಇರುವಂಥ ಜನಪ್ರತಿನಿಧಿಗಳ ಹಕ್ಕನ್ನು ಸಹಾ ಧನುನಿಸುವಂಥ ಒಂದು ಪ್ರಯತ್ನ ಮಾಡುತ್ತೀರಿ, ಅದನ್ನು ತಾವು ಮಾಡಬಾರದು. ಪುನರ್ ವಿಮರ್ಶೆ ಮಾಡಬೇಕೆಂಬ ವಿನಂತಿಯನ್ನು ತಮ್ಮ ಮೂಲಕ ಮಾಡುತ್ತೇನೆ. ಎರಡನೆಯದು, ಸ್ವಲ್ಪ ಒಳ್ಳೆಯ ಅಂಶಗಳ ಬಗ್ಗೆ ಹೇಳಿದ್ದೀರಾದರೆ ಸಂಶೋಧನೆಗಳ ಬಗ್ಗೆ ತಾವು ಉಲ್ಲೇಖ ಮಾಡಿದ್ದೀರಿ. ನೀವುಗಳು ಅದನ್ನು ಉಲ್ಲೇಖ ಮಾಡುವ ಸಂದರ್ಭದಲ್ಲಿ ಬಹುಶಃ ಅನೇಕ ಕಾಲೇಜುಗಳಲ್ಲಿ ನಾನೇ ವೈಯಕ್ತಿಕವಾಗಿ ತಮಗೆ ರೆಫರ್ ಕೂಡ ಮಾಡಿದ್ದೇನೆ. ಇಲ್ಲಿ ಏನಾಗುತ್ತಿದೆ, ಕೆಲವು ಕಾಲೇಜುಗಳಲ್ಲಿ, ಒಳ್ಳೆಯ ಲ್ಯಾಬೊರೇಟರಿಗಳ ವ್ಯವಸ್ಥೆ ಇರಬಹುದು ಅಥವಾ ಇನ್ನಿತರ ಸಂಶೋಧನಾತ್ಮಕ ಏನು ವ್ಯವಸ್ಥೆಗಳು ಇದೆ, ಅದಕ್ಕೆ ಸಂಬಂಧಪಟ್ಟ ಪ್ರಾಧ್ಯಾಪಕರುಗಳಿಂದ ಹಿಡಿದು ಇಲ್ಲಿರುವ ಎಲ್ಲಾ ವ್ಯವಸ್ಥೆಗಳಿದ್ದರೂ ಕೂಡ ಇವತ್ತು ಯೂನಿವರ್ಸಿಟಿ ಕಡೆಯಿಂದ ಅವರಿಗೆ ಮುಕ್ತವಾಗಿ ಪರವಾನಿಗೆಯನ್ನು ಕೊಡುವಂಥದ್ದು, ಎನ್‌ಕರೇಜ್ ಮಾಡುವಂಥ ಒಂದು ವ್ಯವಸ್ಥೆ ಬೇಕು. ಬಹುಶಃ ಅದು ಈ ಬ್ಯೂರೊಕ್ರಾಟಿಕ್ ಸೆಟ್-ಅಪ್‌ನಲ್ಲಿ ಒಂದು ಹಿಂಸ್ರೆನ್ಸ್ ಬಂದು ಎಲ್ಲದಕ್ಕೂ ಯಾವ ರೀತಿ ಅದನ್ನು ತಡೆಮಾಡಬೇಕು ಎಂದು ಯೋಚನೆ ಮಾಡುತ್ತಾರೆಯೇ ವಿನಃ ಈ ರೀತಿ ಒಂದು ಸಂಶೋಧನೆ ಯಾವುದೇ ಒಂದು ಹಂತದಲ್ಲಿ, ಯಾವುದೇ ಒಂದು ಕಾಲೇಜಿನಲ್ಲಿ ನಡೆಯಿತು ಎಂದು ಹೇಳುವ ಸಂದರ್ಭದಲ್ಲಿ ನಾವು ಅದನ್ನು ಎನ್‌ಕರೇಜ್ ಮಾಡಿ, ಅದಕ್ಕೆ ಪ್ರೋತ್ಸಾಹ ಕೊಡುವ ವ್ಯವಸ್ಥೆಯನ್ನು ತರಬೇಕು ಎಂದು ಹೇಳುವ ವಿನಂತಿಯನ್ನು ಮಾಡುತ್ತಿದ್ದೇನೆ. ಮತ್ತೆ ಇದರಲ್ಲಿ ತಾವು ಉಲ್ಲೇಖ ಮಾಡುವಾಗ ಕೂಡ ಹೇಳಿದ್ದೀರಿ. ಬಿಎ, ಬಿಎಸ್ಸಿ, ಬಿಕಾಂ ಅದರಲ್ಲಿ ಬೌಟ್‌ಪುಟ್ ಏನಾಗುತ್ತಿದೆ ಎಂದು ಹೇಳುವಂಥದ್ದು ವಿದ್ಯಾರ್ಥಿಗಳು ಗ್ರಾಜುಯೇಟ್ ಆಗಿ ಹೊರಗೆ ಬಂದ ನಂತರ ಏನು ಅವಸ್ಥೆ ಎಂದು ಕೂಡ ಗೊತ್ತಿದೆ. ಅವರಿಗೆ ಎಂಪ್ಲಾಯ್‌ಮೆಂಟ್ ಏನು ಸಿಗುತ್ತಿದೆ ಎಂದು. ಅಂಥ ಸಂದರ್ಭದಲ್ಲಿ ಆಲ್ಟರ್‌ನೇಟಿವ್ ಆಗಿ ತಾವೇನು ವ್ಯವಸ್ಥೆ ಯೋಚನೆ ಮಾಡಿದ್ದೀರಿ,

ಯಾವ ರೀತಿ ಕೋರ್ಸನ್ನು ವಿದ್ಯಾರ್ಥಿಗಳ ಶಿಕ್ಷಣ ಕೊಡುವ ನಿಟ್ಟಿನಲ್ಲಿ, ಈ ಬಗ್ಗೆ ಏನಾದರೂ ಹೊಸ ಚಿಂತನೆ ಈ ಬಿಲ್ಲಿನಲ್ಲಿ, ಇದೆಯೇ ಎಂದು ನಾನು ಗಮನಿಸುತ್ತಿದ್ದೆ. ಅದು ಎಲ್ಲಿಯೂ ಕಂಡಿಲ್ಲ. ತಾವು ಅದನ್ನು ದಯವಿಟ್ಟು ಅನುಷ್ಠಾನಕ್ಕೆ ತರಬೇಕು ಎಂದು ಹೇಳುವಂಥದ್ದನ್ನು ಒತ್ತಾಯಮಾಡುತ್ತಿದ್ದೇನೆ. ಮತ್ತೆ ಮುಕ್ತ ವಿಶ್ವವಿದ್ಯಾನಿಲಯ ಆದರ ಬಗ್ಗೆ ಸಮಿತಿಯಲ್ಲಿ, ಸಾಕಷ್ಟು ಚರ್ಚೆಗಳನ್ನು ನಡೆಯುವ ಒಂದು ಅವಕಾಶ ನನಗಾಯಿತು. ಅವರು ಅಕೌಂಟ್ಸಿನ್ನು ಏಕೆ ಕೊಟ್ಟಿಲ್ಲ ಎಂದು ನಮ್ಮ ವಿಧಾನಮಂಡಲದ ಪೇಪರ್ ಲೇಡ್ ಕಮಿಟಿಗೆ ಅವರನ್ನು ಕರೆಸಿದಾಗ ಸಾಕಷ್ಟು ಚರ್ಚೆ ಮಾಡುವ ಅವಕಾಶ ನನಗಾಯಿತು. 19 ಸಹಸ್ರಕ್ಕಿಂತ ಜಾಸ್ತಿ ವಿದ್ಯಾರ್ಥಿಗಳು ಇವತ್ತು ರಾಜ್ಯಾದ್ಯಂತ ತಮ್ಮ ಬಿಡುವಿನ ವೇಳೆಯಲ್ಲಿ, ಅದರಲ್ಲಿ, ಕಲಿತು ಹೊರಬಂದಿದ್ದಾರೆ. ಇದನ್ನು ಕೇಳಿದಾಗ ನನಗೆ ತುಂಬಾ ಸಂತೋಷವಾಯಿತು. ಕೇವಲ ಗ್ರಾಜುಯೇಷನ್ ಕೋರ್ಸ್ ಮಾತ್ರವಲ್ಲ, ಡಿಪ್ಲೊಮಾ ಕೋರ್ಸ್ ಮಾತ್ರವಲ್ಲ, ಪೋಸ್ಟ್ ಗ್ರಾಜುಯೇಷನ್ ಕೋರ್ಸ್ ಕೂಡ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಪಟ್ಟ ಕೋರ್ಸುಗಳನ್ನು ಕೂಡಾ ಮಾಡಿದ್ದಾರೆ. ಸೈನ್ಸಿಗೆ ಸಂಬಂಧಪಟ್ಟ, ಲ್ಯಾಬೊರೇಟರಿಗೆ ಸಂಬಂಧಪಟ್ಟ ಸೈನ್ಸ್ ಕೋರ್ಸನ್ನು ಕೂಡ ಇದರಲ್ಲಿ, ಅಳವಡಿಸುವ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ, ಬಹುಶಃ ಇದನ್ನು ಹೆಚ್ಚು ಶಕ್ತಿಯುತ ಮಾಡುವಂಥ ಅವಶ್ಯಕತೆ ತುಂಬಾ ಇದೆ. ಬೇರೆ ರಾಜ್ಯಗಳಲ್ಲಿ ಇದರ ಬಗ್ಗೆ ಈಗಾಗಲೇ ಇದೆ. ನನ್ನ ಹತ್ತಿರ ಸರಿಯಾದ ವಿವರ ಇಲ್ಲ. ಬೇರೆ ರಾಜ್ಯಗಳಲ್ಲಿ ರೈತಾಪಿ ವರ್ಗಗಳಲ್ಲಿ, ಕೂಡ ಅವರು ಮಾಡುವ ಕೃಷಿ ಕ್ಷೇತ್ರದಲ್ಲಿ, ಅಲ್ಲಿ ಪ್ರತ್ಯಕ್ಷವಾಗಿ ಕೆಲಸವನ್ನು ಮಾಡಿಕೊಂಡು ಆ ಒಂದು ಕೋರ್ಸನ್ನು ಅಥವಾ ಎಸ್‌ಎಸ್‌ಎಲ್‌ಸಿ ಪಾಸಾದಂಥ ವಿದ್ಯಾರ್ಥಿಗಳ ಕೂಡ ರೈತಾಪಿ ವರ್ಗದಲ್ಲಿ, ಕೆಲಸ ಮಾಡುತ್ತಾ ಮಾಡುತ್ತಾ ಡಿಪ್ಲೊಮವನ್ನು ಪಾಸ್ ಮಾಡುವುದು, ಬಹುಶಃ ಅತ್ಯುತ್ತಮ ಸರ್ಟಿಫಿಕೇಟುಗಳನ್ನು ಪಡೆಯುವ ಮುಂದಕ್ಕೆ ಒಬ್ಬ ಕೃಷಿ ಕ್ಷೇತ್ರದಲ್ಲಿ ದುಡಿದು ಕೃಷಿ ಪದವೀಧರನಾಗುವ ಒಂದು ವ್ಯವಸ್ಥೆ ಈ ಒಂದು ಯೂನಿವರ್ಸಿಟಿಯಿಂದ ಮಾಡುವುದಕ್ಕೆ ಸಾಧ್ಯವಾಗುತ್ತೆ. ಈ ಯೂನಿವರ್ಸಿಟಿಯನ್ನು ಹೆಚ್ಚು ಶಕ್ತಿಶಾಲಿ ಮಾಡುವಂಥದ್ದರ ಬಗ್ಗೆ ತಾವು ನಿಜವಾಗಿ ಯೋಚನೆ ಮಾಡಬೇಕು ಮತ್ತು ಇದಕ್ಕೆ ಶಕ್ತಿ ತುಂಬಿಸಬೇಕೆಂಬ ವಿನಂತಿಯನ್ನು ಮಾಡುತ್ತಿದ್ದೇನೆ. ಇನ್ನೊಂದು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ವಿಧೇಯಕ, 2000 ಇದರಲ್ಲಿ, ಬಂದಿರುವ ಕೆಲವೊ ಲೋಪದೋಷಗಳಿವೆ. ಇಡೀ ದೇಶದಲ್ಲಿ ಎಲ್ಲಿಯೂ ಇಂಥ ಮಸೂದೆಯನ್ನು ಮಂಡನೆ ಮಾಡಿಲ್ಲ. ಇದರ ಬಗ್ಗೆ ತಾವು ವಿಶೇಷವೆಂದು ಹೇಳಿ ಆಂಧ್ರದ ಬಗ್ಗೆ ಉಲ್ಲೇಖ ಮಾಡಿದ್ದೀರಿ. ಆಂಧ್ರದ ಎಜುಕೇಷನ್ ಸ್ಟಾಂಡರ್ಡ್ ಮತ್ತೆ ನಮ್ಮ ಎಜುಕೇಷನ್ ಸ್ಟಾಂಡರ್ಡ್‌ಗೆ ವ್ಯತ್ಯಾಸವಿರುವುದು ಸರ್ವೇಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರುವಂಥದ್ದು. ಇವತ್ತು ರಾಜ್ಯಮಟ್ಟದಲ್ಲಿ, ಮಾತ್ರವಲ್ಲ, ಇದು ಭಾರತದಲ್ಲಿ ಮಾತ್ರವಲ್ಲ, ಇದು ಅಂತರರಾಷ್ಟ್ರೀಯ ಮಟ್ಟದಲ್ಲಿ, ಕರ್ನಾಟಕದಲ್ಲಿ ಬಂದು ವಿದ್ಯಾಭ್ಯಾಸ ಪಡೆಯುವುದಕ್ಕೂ ಇಲ್ಲಿ ಯೂನಿವರ್ಸಿಟಿಯಲ್ಲಿ, ಅತ್ಯುತ್ತಮ ಶಿಕ್ಷಣ ಸಿಗುತ್ತದೆ ಎಂದು ಹೇಳುವ ಭಾವನೆ ಇದೆ. ಆದರೆ ಈ ವ್ಯವಸ್ಥೆ ಸ್ವಾಯತ್ತ ಎಲ್ಲಿದೆ? ಈ ರೀತಿ ಇರುವ ಗುಣಮಟ್ಟ ಎಲ್ಲಿದೆ?

ಅದೆಲ್ಲಿ ಕಳೆದುಕೊಳ್ಳುತ್ತದೋ ಏನೊ, ಎನ್ನುವ ಹೆದರಿಕೆ ನನಗಿದೆ. ಏನಾಗಿದೆ, ಸರ್ಕಾರೀಕರಣ ಮಾಡುವಂಥದ್ದು. ನೇರವಾಗಿ ಸರ್ಕಾರ ಹಸ್ತಕ್ಷೇಪ ಇದರಲ್ಲಿ, ಆಗುತ್ತಿರುವುದು ನಿಜವಾಗಿ ನಾವೇನು ಅಪೇಕ್ಷೆ ಮಾಡುತ್ತಿದ್ದೇವೋ ಅದನ್ನು ಕಳೆದುಕೊಳ್ಳುವಂಥ ಒಂದು ಸಾಧ್ಯತೆ ಇದೆ. ಈ ಗುಣಮಟ್ಟ ಎಲ್ಲಿಯಾದರೂ ಲೋಪದೋಷವಾಗುತ್ತಾ ಎಂದು ಹೇಳುವಂಥದ್ದು. ಆಂಧ್ರ ಯೂನಿವರ್ಸಿಟಿ ರೀತಿ ಆಂಧ್ರದಲ್ಲಿ ಏನು ಶಿಕ್ಷಣವಿದೆ, ಅದೇ ಸ್ಟಾಂಡರ್ಡ್‌ಗೆ ನಾವು ತರುತ್ತೇವೋ ಏನೊ ಎಂದು ಹೇಳುವಂಥ ಹೆದರಿಕೆ ನನಗಿದೆ. ನನ್ನ ಒಂದು ವಿನಂತಿ ಏನೆಂದರೆ ಈ ಸ್ವಾಯತ್ತತೆ ಮತ್ತು ಗುಣಮಟ್ಟವನ್ನು ಕಾಪಾಡುವ ನಿಟ್ಟಿನಲ್ಲಿ ಈಗ ಇರುವ ವ್ಯವಸ್ಥೆಯನ್ನು ಮುಂದುವರೆಸಬೇಕೆನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ. ರಾಜ್ಯಪಾಲರಿಗೆ ಸಂಬಂಧಪಟ್ಟ ಬಗ್ಗೆ ಹಾಗೆ ಚರ್ಚೆಗಳು ನಡೆದು ಬೇರೆ ಬೇರೆ ಸದಸ್ಯರುಗಳು ಹೇಳಿದರು. ಇಲ್ಲಿ ರಾಜ್ಯಪಾಲರ ಸ್ಥಾನಕ್ಕೆ, ಗೌರವಕ್ಕೆ ಕುಂದು ತರುವ ತಿದ್ದುಪಡಿ ಬರುತ್ತಿದೆ ಎಂದು ಹೇಳುವಂಥದ್ದು ಆಕ್ಷೇಪಗಳಿದೆ. ಪತ್ರಿಕೆಗಳ ಮೂಲಕ ಬೇರೆ ಬೇರೆ ಪ್ರಜ್ಞಾವಂತ ಜನರಲ್ಲೂ ಕೂಡ ಈ ಆಕ್ಷೇಪಗಳು ಬಂದಿದೆ. ಇಲ್ಲಿ ಏನು ಹೇಳುತ್ತಾರೆ ಈ ಮಸೂದೆ ಗೌರವಾನ್ವಿತ ರಾಜ್ಯಪಾಲರು ಸರ್ಕಾರದ ಆದೇಶ ಪಾಲಿಸುವ ಒಬ್ಬ ಅಧಿಕಾರಿಯಂತೆ ಮುಂದಕ್ಕೆ ಗುರುತಿಸಲ್ಪಡುತ್ತಾರೆ ಎಂದು ಹೇಳುವ ಒಂದು ಕಾಮೆಂಟ್ಸ್ ಇದೆ. ಇದಕ್ಕೆ ಕಾರಣವೇನೆಂದರೆ, ಈ ವಿಶ್ಲೇಷಣೆಯನ್ನು ನಾನು ಮಾಡುತ್ತಿದ್ದೇನೆ, ಬಹುಶಃ ರಾಜ್ಯಪಾಲರಿಗೂ ಸರ್ಕಾರಕ್ಕೂ ಏನಾದರೂ ಭಿನ್ನಾಭಿಪ್ರಾಯ ಬಂದಿದೆಯೇ? ಈ ವೈಸ್ ಛಾನ್ಸಲರ್‌ಗಳನ್ನು ನೇಮಕ ಮಾಡುವಲ್ಲಿ, ಆಡಳಿತಾತ್ಮಕವಾಗಿ ಏನಾದರೂ ಭಿನ್ನಾಭಿಪ್ರಾಯ ಬಂದಿದೆಯೇ? ಅದಕ್ಕೋಸ್ಕರ ಈ ಒಂದು ನಿಟ್ಟಿನಲ್ಲಿ ಅದನ್ನು ತರುತ್ತಿದ್ದೀರಾ ಎನ್ನುವ ಒಂದು ಪ್ರಶ್ನೆ. ಮತ್ತೆ ವಿಶ್ವವಿದ್ಯಾನಿಲಯದ ಪ್ರಕರಣಗಳಾಗುವ ಸಂದರ್ಭದಲ್ಲಿ ನೇರವಾಗಿ ವೈಸ್ ಛಾನ್ಸಲರ್‌ಗಳ ಮೇಲೆ ಆರೋಪಗಳು ಬಂದಿರುವ ಸಂದರ್ಭದಲ್ಲಿ ಇವತ್ತು ರಾಜ್ಯಪಾಲರಲ್ಲಿ ಹೋಗಿ ನಾವೇನಾದರೂ ಮನವರಿಕೆ ಮಾಡಿಕೊಂಡು ಇದರ ಬಗ್ಗೆ ಮುಕ್ತವಾದ ವಿಚಾರಣೆ ಮಾಡಬಹುದು ಎನ್ನುವ ಯೋಚನೆ ನಮ್ಮಲ್ಲಿದ್ದರೆ ಬಹುಶಃ ಇನ್ನು ಮುಂದಕ್ಕೆ ಅದು ಆಗುವುದಿಲ್ಲ. ಏಕೆಂದರೆ ನೇರವಾಗಿ ರಾಜ್ಯಪಾಲರನ್ನು ತಮ್ಮ ಸರ್ಚ್ ಕಮಿಟಿ ಮೂಲಕ ಬೇರೆ ಬೇರೆ ಕಮಿಟಿಗಳ ಮೂಲಕ ನೇಮಕ ಕೂಡ ಸರ್ಕಾರವೇ ಮಾಡುತ್ತೆ. ಅಥವಾ ಸರ್ಕಾರದ ಅಧಿಕಾರಿಯಾಗಿ ಸರ್ಕಾರದ ಯೋಜನೆ ಏನು ಇದೆ, ಅದನ್ನು ಅನುಷ್ಠಾನಕ್ಕೆ ತರುವಂಥದ್ದು ಮಾಡುತ್ತಾರೆಯೇ ವಿನಹಾ ಸ್ವಾಯತ್ತತೆ ಸ್ವಾವಲಂಬನೆಯಾಗಿ ಸ್ವತಂತ್ರವಾಗಿ ಯೋಚನೆ ಮಾಡುವಂಥದ್ದು ಎಲ್ಲಿ ಕಳೆದುಕೊಳ್ಳುತ್ತದೋ ಎಂದು ಹೇಳುವ ಹೆದರಿಕೆ ಇದೆ ಎಂದು ಹೇಳುತ್ತೇನೆ. ಮತ್ತೆ ಯಾವುದೇ ಆರೋಪ ಬಂದ ಸಂದರ್ಭದಲ್ಲಿ ತನಿಖೆಮಾಡುವುದಕ್ಕೆ ರಾಜ್ಯಪಾಲರಿಗೆ ಯಾವುದೇ ಅಧಿಕಾರವಿರುವುದಿಲ್ಲ ಎನ್ನುವ ಭಾವನೆ ಕೂಡ ನನ್ನಲ್ಲಿದೆ. ಮತ್ತೆ ವಿಶೇಷವಾಗಿ ಹೊಸ ಹೊಸ ಕಾಲೇಜುಗಳು, ಮುಂದಕ್ಕೆ ಏನಾಗುತ್ತೆ ಎಂದರೆ ನೇರವಾಗಿ ಸರ್ಕಾರದ ಈ ಪ್ರಭಾವವನ್ನು ಉಪಯೋಗ ಮಾಡಿಕೊಂಡು ಹೊಸ

ಫ್ಯಾಕಲ್ಟಿಗಳು ಬಂದು ಅಲ್ಲಿ ವ್ಯವಸ್ಥೆ ಇದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಈ ರೀತಿ ಒತ್ತಡ ಬಂದಿದೆ ಎನ್ನುವ ಕಾರಣಕ್ಕೋಸ್ಕರ ಹೊಸ ಫ್ಯಾಕಲ್ಟಿಗಳು ಬಂದು ಜನರಿಗೆ ಶಿಕ್ಷಣ ಸಂಸ್ಥೆಗಳು ಕಮರ್ಷಿಯಲ್ ಕಮಾಡಿಟಿ ಆಗುವ ರೀತಿ ಬಿಸಿನೆಸ್ ಕಮಾಡಿಟಿ ಆಗುವಂಥದ್ದಕ್ಕೆ ತಾವು ದಯವಿಟ್ಟು ಅವಕಾಶವನ್ನು ಕೊಡಬಾರದು. ವಿಶ್ವವಿದ್ಯಾನಿಲಯಗಳ ಒಂದಿಷ್ಟು ಕಾನೂನು ಪಾಲನೆಗೆ ಕರ್ನಾಟಕ ರಾಜ್ಯ ಅಂತರ ವಿಶ್ವವಿದ್ಯಾನಿಲಯಗಳ ಮಂಡಳಿಯ ರಚನೆಗೆ ಈ ಮಸೂದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ಮಂಡಳಿಗೆ ನಮ್ಮ ರಾಜ್ಯದ ಉನ್ನತ ಶಿಕ್ಷಣ ಸಚಿವರಾಗಿರುವ ತಾವೇ ಅಧ್ಯಕ್ಷರಾಗುತ್ತೀರಿ. ಇಲ್ಲಿ ಏನು ಕಾಣುತ್ತಿದೆಯೆಂದರೆ, ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಪತಿಗಳು ಇದಕ್ಕೆ ಸದಸ್ಯರಾಗಿರುವ ಒಂದು ನಿಯಂತ್ರಣ ಸಂಸ್ಥೆಯಾಗಿದೆ. ಇದು ರಾಜ್ಯಪಾಲರಿಗೆ ಸಮಾನಾಂತರವಾಗಿರುವ ಅಧಿಕಾರದ ವ್ಯವಸ್ಥೆಯಲ್ಲಿ, ಇದುವರೆವಿಗೂ ರಾಜ್ಯಪಾಲರ ಸ್ಥಾನದಲ್ಲಿ ಏನೇನಾಗುತ್ತಿತ್ತೋ ಅದೀಗ ಉನ್ನತ ಶಿಕ್ಷಣ ಸಚಿವರ ನೇತೃತ್ವದಲ್ಲಿ ಆಗುತ್ತದೆಯೇ? ಇದು ಅಧಿಕಾರ ವಿಕೇಂದ್ರೀಕರಣದ ಹಸ್ತಾಂತರಕ್ಕೆ ಸಾಧನವಾಗುತ್ತದೆಯೇ? ಅಥವಾ ಆ ನಿಟ್ಟಿನಲ್ಲಿ ಪ್ರಯತ್ನವಾಗಿದೆಯೇ? ಎಂಬುದು ನನ್ನ ಒಂದು ಸಂಶಯವಾಗಿದೆ. ಕರ್ನಾಟಕ ರಾಜ್ಯ ಅಂತರ ವಿಶ್ವವಿದ್ಯಾನಿಲಯ ಮಂಡಳಿಯು ವಿಶ್ವವಿದ್ಯಾನಿಲಯಗಳ ಆಡಳಿತದ ವಿಚಾರಗಳಲ್ಲಿ ತೀರ್ಮಾನ ತೆಗೆದುಕೊಳ್ಳಲಿದೆ. ಸರ್ಕಾರ ಒಪ್ಪಿದ ತೀರ್ಮಾನವನ್ನು ಕುಲಪತಿಗಳು ಜಾರಿಗೊಳಿಸುವುದು ಕಷ್ಟಾಯವಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಮಂಡಳಿಯು ಕೈಗೊಳ್ಳುವ ಮಹತ್ವದ ತೀರ್ಮಾನಗಳಲ್ಲಿ, ರಾಜ್ಯಪಾಲರ ಯಾವುದೇ ನೇರ ಪಾತ್ರವಿರುವುದಿಲ್ಲ. ಬದಲಾಗಿ ರಾಜ್ಯಪಾಲರೇ ಕುಲಾಧಿಪತಿಗಳಾಗಿರುವಂಥ ಎಲ್ಲಾ ವಿಶ್ವವಿದ್ಯಾನಿಲಯಗಳ ಮಂಡಳಿಯ ಆದೇಶವನ್ನು ಪಾಲಿಸಲೇಬೇಕಾದಂಥ ಸ್ಥಿತಿ ಬರುತ್ತದೆ. ಅವರೊಬ್ಬ ಹಿರಿಯ ಸರ್ಕಾರಿ ಅಧಿಕಾರಿಯಾಗಿ ಇರುತ್ತಾರೆಯೇ ವಿನಾ ಅವರಿಗೆ ಇಂಡಿವಿಜುಯಲ್ ಐಡೆಂಟಿಟಿ ಏನಿದೆ, ಒಂದು ಗೌರವ ಸ್ಥಾನ ಏನಿರುತ್ತದೆ, ಅದನ್ನು ಕಳೆದುಕೊಳ್ಳುತ್ತಾರೆಂಬ ಸಂಶಯ ನನ್ನನ್ನು ಕಾಡುತ್ತಿದೆ. ಬಹುಶಃ ರಾಜ್ಯ ಸರ್ಕಾರ ವಿಶ್ವವಿದ್ಯಾನಿಲಯಗಳಿಗೆ ಹಣ ಕೊಡುತ್ತದೆನ್ನುವ ಕಾರಣಕ್ಕಾಗಿ ತಾವು ಈ ರೀತಿಯಾಗಿ ಯೋಚನೆ ಮಾಡುತ್ತಿದ್ದೀರಾ? ಎಂಬ ಗುಮಾನಿ ಬರುತ್ತಿದೆ. ಈ ಮಸೂದೆ ಅಂಗೀಕೃತವಾದರೆ ಕರ್ನಾಟಕದಲ್ಲಿರುವ ಎಲ್ಲಾ ವಿಶ್ವವಿದ್ಯಾನಿಲಯಗಳಿಗಿರುವ ಗೌರವ, ಸ್ವಾತಂತ್ರ್ಯ, ಸ್ವಾಯತ್ತತೆ ಮತ್ತು ಶಿಕ್ಷಣದ ಗುಣಮಟ್ಟವೇನಿದೆ, ಅದೆಲ್ಲವನ್ನೂ ಕಳೆದುಕೊಂಡು ಕುಸಿದುಹೋಗತ್ತದೆಂಬ ಹೆದರಿಕೆಯಿಂದ ಈ ವಿಷಯವನ್ನು ತಮ್ಮ ಮುಂದೆ ಮಂಡಿಸುತ್ತಿದ್ದೇನೆ. ದಯವಿಟ್ಟು ಇದರ ಬಗ್ಗೆ ತಾವು ಪುನರ್ ವಿಮರ್ಶಿಸಬೇಕು. ವಿಶೇಷವಾಗಿ ಸೆನೆಟ್‌ಗೆ ಮತ್ತು ರಾಜ್ಯಪಾಲರಿಗೆ ಸಂಬಂಧಿಸಿದಂತೆ ಪುನರ್ ವಿಮರ್ಶೆ ಮಾಡಬೇಕು. ಮುಕ್ತ ವಿಶ್ವವಿದ್ಯಾನಿಲಯ ಇರಬಹುದು, ಬಿ.ಎ., ಬಿ.ಎಸ್.ಸಿ. ಅಥವಾ ಗ್ರ್ಯಾಜುಯೇಷನ್‌ಗೋಸ್ಕರ ಪರ್ಯಾಯವಾಗಿ ಏನೆಲ್ಲಾ ಹೊಸ ವ್ಯವಸ್ಥೆ ತರುವುದಕ್ಕೆ ಇಚ್ಛಿಸಿದ್ದೀರಿ, ವಿಶ್ವವಿದ್ಯಾನಿಲಯಗಳಿಗೆ ಸಂಬಂಧಿಸಿದಂತೆ ಈ ವಿಧೇಯಕ ತಂದು ಜನಸಾಮಾನ್ಯರಲ್ಲಿ ಅಥವಾ ಜನಪ್ರತಿನಿಧಿಗಳಲ್ಲಿ ಅಕ್ರೋಶ ಬಾರದ

ರೀತಿಯಲ್ಲಿ ಹಾವು ಪುನರ್ ವಿಮರ್ಶಿಸಬೇಕು ಹಾಗೂ ತಂದಿರುವ ವಿಧೇಯಕವನ್ನು ಹಿಂತೆಗೆದುಕೊಳ್ಳಬೇಕೆಂದು ವಿನಂತಿಸಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :— ಬಹುಶಃ ತಮಗೆಲ್ಲರಿಗೂ ಗೊತ್ತಿರುವಂತೆ ನಾವು, ವಿರೋಧಪಕ್ಷದ ನಾಯಕರು ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಕುಳಿತು ಮಾತನಾಡಿ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಬಹಳ ಜನ ಮಾನ್ಯ ಸದಸ್ಯರು ಇಂದು ಅಧಿವೇಶನದ ಕೊನೆಯ ದಿನವೆಂದು ಭಾವಿಸಿ ತಂತಮ್ಮ ಕ್ಷೇತ್ರಗಳಲ್ಲಿನ ಕೆಲಸ-ಕಾರ್ಯಗಳಲ್ಲಿ, ಮಗ್ನರಾಗಲು, ಆಶ್ರಯ ಸಮಿತಿ ಸಭೆಯಲ್ಲಿ ಪಾಲ್ಗೊಳ್ಳಲು ಅಥವಾ ದೆಹಲಿಗೆ ತೆರಳುವ ಕಾರ್ಯಕ್ರಮವನ್ನೂ ಹಾಕಿಕೊಂಡಿರುವುದರಿಂದ, ಅಧಿವೇಶನದ ಅವಧಿಯನ್ನು ನಾಳೆ ಒಂದು ದಿನದ ಮಟ್ಟಿಗೆ ವಿಸ್ತರಿಸಲು ನಿರ್ಧರಿಸಿ ನಾಳೆ ಬೆಳಿಗ್ಗೆ ಪುನಃ ಹತ್ತು ಗಂಟೆಗೆ ಸೇರುವುದೆಂದು ತೀರ್ಮಾನಿಸಲಾಗಿದೆ. ನಾಳೆಯೇ ಅಧಿವೇಶನದ ಕೊನೆಯ ದಿವಸ. ಇದು ಉಚಿತವಾಗಿರುವುದರಿಂದ ಇಷ್ಟು ದಿವಸಗಳ ಕಾಲ ಸಹಕರಿಸಿದಂತೆಯೇ ನಾಳೆಯೂ ಸಹ ಸಹಕರಿಸಬೇಕೆಂದು ಕೋರುತ್ತೇನೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ :— ಮಾನ್ಯ ಅಧ್ಯಕ್ಷರೆ, ಇವತ್ತು ಶುಕ್ರವಾರವಾಗಿರುವುದರಿಂದ ಒಂದು ಖಾಸಗಿ ಸದಸ್ಯರ ವಿಧೇಯಕವಿದ್ದು, ಅದನ್ನು ಮಂಡಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಅವಕಾಶವಿಲ್ಲವೆಂದರೆ ಹೇಗೆ?

ಅಧ್ಯಕ್ಷರು :— ಅವಕಾಶ ಇದ್ದುದರಿಂದಲೇ ಅದನ್ನು ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರಿಸಿದ್ದು.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ :— ನಾಳೆಯಾದರೂ ಅದನ್ನು ಮುಂದುವರಿಸಬಹುದಲ್ಲ.

ಅಧ್ಯಕ್ಷರು :— ನೋಡೋಣ

+ಶ್ರೀ ಜಿ. ರಾಜಗೌಡ (ಹನೂರು) :— ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಉನ್ನತ ಶಿಕ್ಷಣ ಸಚಿವರು 1973ನೇ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯಿದೆಗೆ ಸಮಗ್ರವಾಗಿ ತಿದ್ದುಪಡಿ ತಂದಿರುವುದು ಸಮಯೋಚಿತ ಹಾಗೂ ಶ್ಲಾಘನೀಯವಾದುದಾಗಿದೆ. ಈ ಮಸೂದೆಯಲ್ಲಿ ವಿಶ್ವವಿದ್ಯಾನಿಲಯಗಳ ವಿವಿಧ ಹಂತಗಳಲ್ಲಿ ರಾಜ್ಯ ಸರ್ಕಾರ ಪ್ರವೇಶಿಸುವುದನ್ನು ತಡೆಗಟ್ಟುವಿಕೆ, ಸೆನೆಟ್ ರದ್ದುಗೊಳಿಸುವಿಕೆ ಮುಂತಾದ ಅಂಶಗಳಿವೆಯೆಂದು ಅಡಕವಾಗಿದೆ. ಆದರೆ, ಒಂದು ವಿಷಯದಲ್ಲಿ ಸ್ವಲ್ಪ ಮರುಚಿಂತನೆ ಮಾಡುವುದು ಅಗತ್ಯವೆಂದು ನನಗನಿಸುತ್ತದೆ. ಏನೆಂದರೆ, ಕುಲಾಧಿಪತಿ ಮತ್ತು ಕುಲಪತಿಗಳಿಗೂ ಮಧ್ಯೆ ಸೋದರ ಸಮಿತಿಯನ್ನು ರಚಿಸುವಂತಾದ್ದು ಯು.ಜಿ.ಸಿ.ಗೆ ವಿರುದ್ಧವಾಗಿದೆಯೆಂಬ ಶಂಕೆ

ನಮಗಿರುವುದರಿಂದ ಇದರ ಬಗ್ಗೆ ಮಾನ್ಯ ಸಚಿವರು ದಯವಿಟ್ಟು ಸ್ಪಷ್ಟೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಉನ್ನತ ಶಿಕ್ಷಣವನ್ನು ದೂರ ಶಿಕ್ಷಣದ ಮೂಲಕ ಕೊಡಬೇಕೆಂಬ ಉದ್ದೇಶದಿಂದ ರಾಜ್ಯದಲ್ಲಿ ಮುಕ್ತ ವಿಶ್ವವಿದ್ಯಾನಿಲಯಗಳ ಸ್ಥಾಪನೆಯಾಯಿತು. ಈ ನಿಟ್ಟಿನಲ್ಲಿ ಸರ್ಕಾರ 1996ನೇ ಇಸವಿಯಲ್ಲಿ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಅನುಮತಿ ಕೊಟ್ಟಿತು. ಮುಕ್ತ ವಿಶ್ವವಿದ್ಯಾನಿಲಯ ತನ್ನ ಕೆಲಸ-ಕಾರ್ಯಗಳನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಿಸಿಕೊಂಡು ಬರುತ್ತಿದೆ. ಸದರಿ ಮುಕ್ತ ವಿಶ್ವವಿದ್ಯಾನಿಲಯಗಳನ್ನು ಈ ಮಸೂದೆ ತರುವುದರ ಮೂಲಕ ಬೆಂಗಳೂರು ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳೆಂದು ಮಾಡಿರುವುದು ಸರಿಯೇ? ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ರಾಜ್ಯದಲ್ಲಿ ರಾಜೀವ್‌ಗಾಂಧಿ ವೈದ್ಯಕೀಯ ವಿಶ್ವವಿದ್ಯಾನಿಲಯ ಸ್ಥಾಪನೆಯಾದಾಗ, ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಂಥ ಇತರ ವೈದ್ಯಕೀಯ ಕಾಲೇಜುಗಳು ಇದಕ್ಕೆ ಸೇರ್ಪಡೆಯಾದಂತೆ, ಸರ್ ಎಂ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ಪ್ರಾರಂಭವಾಗಲೂ ಸಹ ಈ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇತರ ತಾಂತ್ರಿಕ ಕಾಲೇಜುಗಳು ಇದಕ್ಕೆ ಸೇರ್ಪಡೆಯಾದವು. ಆದರೆ, ಬೆಂಗಳೂರು ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳಿಗೆ ಮಾತ್ರ ಏಕೆ ಇತರ ಕಾಲೇಜುಗಳು ಸೇರ್ಪಡೆಯಾಗಲಿಲ್ಲ? ಕಾರಣವೇನು? ತಾವೇಕೆ ಇಂತಹ ತಾರತಮ್ಯವೆಸಗುತ್ತಿದ್ದೀರಿ? ಯಾವ ರೀತಿ ತಾವು ರಾಜೀವ್‌ಗಾಂಧಿ ವೈದ್ಯಕೀಯ ವಿಶ್ವವಿದ್ಯಾನಿಲಯ ಮತ್ತು ಸರ್ ಎಂ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯಗಳ ಪಾವಿತ್ರ್ಯತೆಯನ್ನು ಕಾಪಾಡಿದ್ದೀರೋ ಅದೇ ಪಾವಿತ್ರ್ಯತೆಯನ್ನು ಈ ವಿಶ್ವವಿದ್ಯಾನಿಲಯಗಳಿಗೇಕೆ ಕಾಪಾಡಿಕೊಂಡಿಲ್ಲ? ಏಕೆ ಈ ವೈತಾಸ? ತಾವು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮುಕ್ತ ಅವಕಾಶ ಬಿಲ್ಲಿಸಿಕೊಟ್ಟಿರುವಂತೆ ಕರ್ನಾಟಕ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯಗಳಿಗೆ ಅಂಟಿ ತೆರುವಿನ ಶಿಕ್ಷಣದ ಸೇವೆ ಒದಗಿಸಿಕೊಡದೆ ಹೋದರೆ ಇದರ ಪಾವಿತ್ರ್ಯತೆಗೆ ಧಕ್ಕೆ ಬರುತ್ತದೆ ಎಂದು ಹೇಳಬಯಸುತ್ತೇನೆ. ಇದರ ಬಗ್ಗೆ ಮಾನ್ಯ ಸಚಿವರು ಹೆಚ್ಚಿನ ಆಸಕ್ತಿವಹಿಸಬೇಕೆಂದು ಕೇಳಿಕೊಳ್ಳುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರಿಗೆ ಉನ್ನತ ಶಿಕ್ಷಣ ಕೊಡುವುದಕ್ಕೆ ಮಾರ್ಗವಿದ್ದು, ಯಾರು ಒಂದನೇ ತರಗತಿಯಿಂದ ಪದವಿಯ ತನಕ ಬರುತ್ತಾರೆ, ಆ ರೀತಿ ನೂರಕ್ಕೆ ನಾಲ್ಕು ಜನರು ಮಾತ್ರ ಬರುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿರುವವರಿಗೆ ಹೆಚ್ಚಿನ ರೀತಿಯಲ್ಲಿ ಉನ್ನತ ಶಿಕ್ಷಣ ಕೊಡುವಂಥ ವ್ಯವಸ್ಥೆಯಿರುವಾಗ ಅದರ ಪಾವಿತ್ರ್ಯತೆಯನ್ನು ಕಾಪಾಡಬೇಕಾಗಿರುವ ತಾವು ಧಕ್ಕೆ ತಂದು ಈ ರೀತಿ ಮಾಡಿದರೆ ಏನು ಪ್ರಯೋಜನವಾಗುತ್ತದೆ? ರಾಜ್ಯದಲ್ಲಿ ರಾಜೀವ್ ಗಾಂಧಿ ವೈದ್ಯಕೀಯ ವಿಶ್ವವಿದ್ಯಾನಿಲಯ ಮತ್ತು ಸರ್ ಎಂ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯಗಳನ್ನು ಪ್ರಾರಂಭಿಸಿದ್ದು, ಅದಕ್ಕೆ ಒಂದು ರೀತಿ ತಗೆದುಕೊಂಡರೆ ಮುಕ್ತ ವಿಶ್ವವಿದ್ಯಾನಿಲಯಗಳಿಗೆ ಇನ್ನೊಂದು ರೀತಿಯಲ್ಲಿ ತೆಗೆದುಕೊಳ್ಳುತ್ತಿರುವುದರಿಂದ, ಮಸೂದೆಯ ಸೆಕ್ಷನ್ 4(1)ಕ್ಕೆ ಒಂದು ತಿದ್ದುಪಡಿ ತರಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

Existing provision in the Bill - Clause 4(1) F:

"to provide for instruction (including instruction by correspondence), teaching and training in such branches of learning and course of study as it may think fit and make provisions for dissemination of knowledge and research.

I propose amendment to the above clause thus:

"to provide for instruction, teaching and training in such branches of learning and course of study as it may think fit and make provisions for research and dissemination of knowledge"

ಈ ತಿದ್ದುಪಡಿಯನ್ನು ತಮಗೆ ಕಳುಹಿಸಿಕೊಡುತ್ತಿದ್ದು, ತಾವು ಈ ಕುರಿತು ಉತ್ತರಿಸುವಾಗ ನಾನು ತಂದಿರುವ ತಿದ್ದುಪಡಿಗೆ ಗೌರವ ಕೊಟ್ಟು ಊರ್ಜಿತಗೊಳಿಸಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ತಮ್ಮಲ್ಲಿ ಕೇಳಿಕೊಂಡು ನನ್ ಮಾತುಗಳನ್ನು ಮುಗಿಸುತ್ತೇನೆ.

7.50 ಪಿ.ಎಂ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) :— ಮಾನ್ಯ ಅಧ್ಯಕ್ಷರೆ, ಈ ಬಿಲ್ಲಿನಲ್ಲಿ ಸರ್ಕಾರ ವಿಶ್ವವಿದ್ಯಾನಿಲಯಗಳಿಗೆ ನಾಮಕರಣ ಮಾಡಲು ಹೊರಟಿದೆ, ಕಾಂಗ್ರೇಸೀಕರಣ ಮಾಡಲು ಹೊರಟಿದೆಯೆಂದು ಮಾತನಾಡಿದ್ದಾರೆ. ಆದರೆ ರಾಜ್ಯಪಾಲರು ಸಹ ನಾಮಕರಣ ಮಾಡುವುದೂ ತಪ್ಪೇ. ಪ್ರಜಾಪ್ರಭುತ್ವ ವ್ಯವಸ್ಥೆ ನಮ್ಮಲ್ಲಿದೆ. ಅದರಂತೆ ಉಪಕುಲಪತಿಗಳೂ ಸಹ ಚುನಾವಣೆ ಮೂಲಕವೇ ಆರಿಸಿಬರಬೇಕು. ಆ ರೀತಿ ಕಾನೂನನ್ನು ತಂದು ಇತಿಹಾಸದಲ್ಲಿ ತಾವು ಉಳಿಯಲು ಪ್ರಯತ್ನ ಮಾಡಿ. ನನಗೆ ಗೊತ್ತಿರುವ ಹಾಗೆ ನಮ್ಮ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಮಾನ್ಯ ಅಡಿಕೆಯವರು ಕೊನೆಯ ಚುನಾಯಿತ ಉಪಕುಲಪತಿಗಳಾಗಿ ಬಂದಿದ್ದವರು. ಆದರೆ ಆ ವ್ಯವಸ್ಥೆ ಹೋಗಿಬಿಟ್ಟಿತು. ನಾನು ಸಚಿವನಾಗಿ ಕೆಲಸ ಮಾಡಿದ್ದೇನೆ, ನನಗೆ ಗೊತ್ತಿರುವ ಹಾಗೆ ಆ ಉಪಕುಲಪತಿಯಾಗುವವರು ಎಷ್ಟು ಜನ ಸಚಿವರ ಮನೆಗಳಿಗೆ ಹೋಗಿ ನಮಸ್ಕಾರ ಮಾಡಬೇಕು. ಇದನ್ನು ನಾನು ನೋಡುತ್ತಿದ್ದೇನೆ. ರಾಜ್ಯಪಾಲರೂ ನಾಮಕರಣ ಮಾಡುವುದು ಬೇಡ. ಈ ಹಿಂದೆ ಏನು ಕಾನೂನು ಇತ್ತೋ ಅದನ್ನೇ ಮಾಡಿ. ಚುನಾವಣೆ ಮೂಲಕ ಆರಿಸಿತರತಕ್ಕ ವ್ಯವಸ್ಥೆ ಮಾಡಬೇಕು. ಆಗ ತಾವು ಇಡೀ ರಾಷ್ಟ್ರದಲ್ಲಿ ಮಾದರಿಯಾಗುತ್ತೀರಿ. ವಿದ್ಯಾ ಇಲಾಖೆಯನ್ನು ದೇವರ ಇಲಾಖೆಯೆಂದು ಹೇಳುತ್ತಾರೆ. ಏಕೆಂದರೆ ಅಂದಿನ ದಿವಸಗಳಲ್ಲಿ ಇದು ಅತ್ಯೊಂದು

ಭ್ರಷ್ಟಾಚಾರ ಮುಕ್ತವಾದ ಇಲಾಖೆಯಾಗಿತ್ತು. ಎಲ್ಲಾ ಕ್ಷೇತ್ರದಲ್ಲಿ ಒಳ್ಳೆಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ. ಒಳ್ಳೆಯ ಅಧಿಕಾರಿಗಳು, ಸಚಿವರೂ ಇದ್ದಾರೆ, ಕೆಟ್ಟ ಅಧಿಕಾರಿಗಳು ಸಚಿವರೂ ಇದ್ದಾರೆ. ಆದರೆ ನಾವು ಚಿಕ್ಕವರಿದ್ದಾಗ ವಿದ್ಯಾ ಇಲಾಖೆ ಮಾತ್ರ ಭ್ರಷ್ಟಾಚಾರದಿಂದ ಮುಕ್ತವಾಗಿದ್ದಂಥ ಇಲಾಖೆಯಾಗಿತ್ತು. ಆದರಲ್ಲೂ ವಿಶ್ವವಿದ್ಯಾನಿಲಯಗಳಲ್ಲಿ ಭ್ರಷ್ಟಾಚಾರವಿರಲಿಲ್ಲ. ಆದರೆ ಇವತ್ತು ವಿದ್ಯಾ ಇಲಾಖೆಯಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಇದನ್ನು ನಿರ್ಮೂಲನೆ ಮಾಡುವ ಬಗ್ಗೆ ಬಿಲ್ಲಿನಲ್ಲಿ ಯಾವುದೇ ವಿಚಾರ ಪ್ರಸ್ತಾಪವಾಗಿಲ್ಲ. ಇವತ್ತು ನಿಜವಾದ ಮೆರಿಟ್ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ. ಇವತ್ತು ವಿಶ್ವವಿದ್ಯಾನಿಲಯಗಳಲ್ಲಿ ಮಕ್ಕಳಿಗೆ ಕ್ಲಾಸ್‌ನ್ನು ಕೊಡುತ್ತಿದ್ದಾರೆ, ಆದರೆ ವಿದ್ಯಾರ್ಥಿಗಳೇ ಕ್ಲಾಸಿಗೆ ಬರುತ್ತಿಲ್ಲ. ಮೊದಲ ದರ್ಜೆಗೆ ಎಷ್ಟು, ಎರಡನೆ ದರ್ಜೆಗೆ ಎಷ್ಟು ಎಂದು ಬೆಲೆಗಳು ನಿಗದಿಯಾಗಿದೆ. ಇದು ವಾಸ್ತವಿಕವಾಗಿ ನಡೆಯತಕ್ಕದ್ದಾಗಿದೆ. ಇದನ್ನು ತಡೆಗಟ್ಟಲು ಏನು ಮಾಡುತ್ತೀರಿ?

ಶ್ರೀ ಎ.ಆರ್. ಕೃಷ್ಣಮೂರ್ತಿ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ಪ್ರಜಾವಾಣಿ ಪತ್ರಿಕೆಯಲ್ಲಿ ವರದಿ ಬಂದಿದೆ. ಜನವರಿಯಲ್ಲಿ ನಡೆದಂಥ ಮೈಸೂರು ವಿಶ್ವವಿದ್ಯಾನಿಲಯದ ಎಂ.ಬಿ.ಬಿ.ಎಸ್.ಸಿ. ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನದಲ್ಲಿ ಸಾಕಷ್ಟು ಅವ್ಯವಹಾರವಾಗಿದೆ, ಅಂಕಪಟ್ಟಿ ತಿದ್ದತಕ್ಕ ಕೆಲಸವಾಗಿರುವ ಬಗ್ಗೆ ವರದಿಯಾಗಿದೆ. ಆದ್ದರಿಂದ ಇಂಥದ್ದನ್ನು ತಡೆಗಟ್ಟಲು ಇದರಲ್ಲಿ ತಿದ್ದುಪಡಿಯನ್ನು ತರಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಅಧ್ಯಕ್ಷರೆ, ಡಾಕ್ಟರೇಟ್ ಪಡದಂಥವರು ಈ ಇಲಾಖೆಯ ಸಚಿವರಾಗಿ ಬಂದಿದ್ದು ಬಹಳ ಸಂತೋಷದ ವಿಚಾರ. ಅವರ ಹುದ್ದೆ ಕ್ಯಾಬಿನೇಟ್ ದರ್ಜೆಯದ್ದಾಗಿರಬೇಕಾಗಿತ್ತು. ಆದರೆ ದುರ್ದೈವದಿಂದ ರಾಜ್ಯ ಸಚಿವರ ದರ್ಜೆಯನ್ನು ಕೊಟ್ಟಿದ್ದಾರೆ. ಇದನ್ನು ಮಾಡುವುದು ಮುಖ್ಯಮಂತ್ರಿಗಳಿಗೆ ಬಿಟ್ಟ ವಿಚಾರ. ಉನ್ನತ ಶಿಕ್ಷಣಕ್ಕೆ ಯಾವ ದರ್ಜೆಯ ಸಚಿವರು ಇರಬೇಕು ಎಂಬ ಬಗ್ಗೆ ನಾವು ಸಲಹೆ ಮಾಡುತ್ತೇವೆ, ಅದನ್ನು ಮಾಡುವುದು ಬಿಡುವುದು ಅವರಿಗೆ ಬಿಟ್ಟ ವಿಚಾರ. ಆದರೆ ಈ ಹಿಂದೆ ಎಲ್ಲಾ ಕಾಲದಲ್ಲೂ ಇದು ಕ್ಯಾಬಿನೇಟ್ ದರ್ಜೆಯದ್ದಾಗಿತ್ತು. ಮಾನ್ಯ ಸಚಿವರು ಪ್ರಾಮಾಣಿಕರು ಎಂದು ನಾನು ಹೇಳುತ್ತೇನೆ. ತಾವು ಡಾಕ್ಟರೇಟ್ ಆದವರು, ವಿಶ್ವವಿದ್ಯಾನಿಲಯಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆ ಹೇಗೆ ಕ್ರಮತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ವಿಚಾರ ಮಾಡಿ. ಇದಕ್ಕೆ ಸಂಬಂಧಪಟ್ಟಂತೆ ಡೈರೆಕ್ಟರೇಟ್ ಇದೆ. ಇಲ್ಲಿಗೆ ಪ್ರೊಫೆಸರ್‌ಗಳನ್ನು ತಂದು ಹಾಕಿಬಿಡುತ್ತೀರಿ. ಅವರಿಗೆ ಅಡ್ಮಿನಿಸ್ಟ್ರೇಷನ್‌ನೇ ಗೊತ್ತಿಲ್ಲವೆಂದು ಹೇಳಿದ್ದಾರೆ. ಆದರೆ ಅವರುಗಳಿಗೆ ಗೊತ್ತಿಲ್ಲದಿರುವುದೇ ಇಲ್ಲ. ಎಲ್ಲವೂ ಗೊತ್ತಿದೆ. ನಿರ್ದೇಶಕರನ್ನು, ಜಂಟಿನಿರ್ದೇಶಕರನ್ನು ಪ್ರೊಫೆಸರ್‌ಗಳನ್ನು ನೇಮಕ ಮಾಡಿದ್ದಾರೆ. ಆದರೂ ಸಹ ಅಲ್ಲಿ ಭ್ರಷ್ಟಾಚಾರವಿದೆ. ಯಾವ ಇಲಾಖೆಯಲ್ಲೂ ಆಗದಿರುವಷ್ಟು ಭ್ರಷ್ಟಾಚಾರ ತಮ್ಮ

ಇಲಾಖೆಯಲ್ಲಿ ಆಗುತ್ತಿದೆ. ವಿದ್ಯಾ ಇಲಾಖೆ ಭ್ರಷ್ಟಾಚಾರದಲ್ಲಿ ಇಂದು ಮೊದಲನೆಯ ಸ್ಥಾನಕ್ಕೆ ಬಂದಿದೆ. ಜನರಿಗೆ ಒಳ್ಳೆಯದನ್ನು ಕಲಿಸುವ ಇಲಾಖೆ ಇದಾಗಿದೆ. ನಮ್ಮನ್ನು, ನಿಮ್ಮನ್ನು, ಎಲ್ಲರನ್ನೂ ತಯಾರು ಮಾಡತಕ್ಕ ಇಲಾಖೆ ಇದಾಗಿದೆ. ಅಲ್ಲಿ, ನೇಮಕಾತಿಗಳನ್ನು ಮಾಡುತ್ತಾರೆ ಅಲ್ಲಿ ಎಲ್ಲವನ್ನು ಮೆರಿಟ್ ಆಧಾರದ ಮೇಲೆ ಮಾಡುವಂತೆ ಮಾಡಿಬಿಡಿ. ನಾವಿದ್ದಾಗ ಪ್ರಾಥಮಿಕ ಶಾಲಾ ಉಪಾಧ್ಯಾಯರ ನೇಮಕಾತಿಯನ್ನು ಮೆರಿಟ್ ಆಧಾರದ ಮೇಲೆ ಮಾಡಿದ್ದೆವು. ಆಗ ಇದರಲ್ಲಿ ಭ್ರಷ್ಟಾಚಾರ ಕಡಿಮೆಯಾಗುತ್ತದೆ. ನಮ್ಮಲ್ಲಿ, ಪ್ರಾಥಮಿಕ ಶಿಕ್ಷಕರ ನೇಮಕಾತಿಯಲ್ಲಿ ಭ್ರಷ್ಟಾಚಾರವಾಗಲಿಲ್ಲ. ಅದೇ ರೀತಿ ವಿಶ್ವವಿದ್ಯಾನಿಲಯದಲ್ಲಿ ಭ್ರಷ್ಟಾಚಾರವನ್ನು ತಡೆಗಟ್ಟಲು ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತೀರಿ ಎಂದು ವಿಚಾರ ಮಾಡಿ. ಇವತ್ತೇ ಅದರ ಬಗ್ಗೆ ಸಲಹೆ ಕೊಡಿ ಎಂತರೆ ನಮಗೆ ಆಗುವುದಿಲ್ಲ. ಬೇಕಾದರೆ ಈ ಬಿಲ್ಲು ಮುಗಿದ ಮೇಲೆ ನಮ್ಮನ್ನೆಲ್ಲ ಕರೆಯಿರಿ, ನಮ್ಮ ನಮ್ಮ ಅನುಭವವನ್ನು ಹೇಳಿ ಯಾವ ರೀತಿ ಇದನ್ನು ತಡೆಗಟ್ಟಬಹುದು ಎಂಬ ಬಗ್ಗೆ ಹೇಳುತ್ತೇವೆ. ಆ ಇಲಾಖೆಯಲ್ಲಿ ಯಾವುದೇ ಕಡತವೂ ಓಡಾಡುವುದೇ ಇಲ್ಲ. ಇದ್ದಲ್ಲೇ ಇರುತ್ತದೆ. ಕಾಲೇಜಿನಿಂದ ಬರುವ ಒಬ್ಬರು ಪ್ರಾಚಾರ್ಯರು ತಮ್ಮ ಇಲಾಖೆಯ ಎರಡನೇ ದರ್ಜೆ ಗುಮಾಸ್ತನಿಗೆ ನಮಸ್ಕಾರ ಮಾಡಬೇಕಾದ ಪರಿಸ್ಥಿತಿ ಇದೆ. ಆದ್ದರಿಂದ ವಿಶ್ವವಿದ್ಯಾನಿಲಯಗಳಲ್ಲಿರುವ ಭ್ರಷ್ಟಾಚಾರವನ್ನು ಮಾನ್ಯ ಸಚಿವರೇನು ಬಿಲ್ಲನ್ನು ತಂದಿದ್ದಾರೆ ಇದರಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕು. ಇಡೀ ರಾಷ್ಟ್ರದಲ್ಲಿ ಮಾದರಿಯಾಗಬೇಕಾದರೆ ಎಲ್ಲಾ ಉಪಕುಲಪತಿಗಳನ್ನು ಚುನಾವಣೆಯ ಮೂಲಕ ಆಯ್ಕೆ ಮಾಡುವ ಪದ್ಧತಿಯನ್ನು ತರುವ ಬಿಲ್ಲನ್ನು ತನ್ನಿ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಯ ಮೂಲಕ ಆಯ್ಕೆ ಮಾಡಿದರೆ ಯಾರ ಮುಲಾಜು ಇಲ್ಲದಂತೆ ಬರುತ್ತಾರೆ. ಏಕೆಂದರೆ ಉಪಕುಲಪತಿಗಳಾಗುವವರು ಸಚಿವರುಗಳ ಮನೆಗೆ ಬಂದು ಹೋಗುವುದನ್ನು ನೋಡಿ ನಮಗೆ ಅನುಭವವಾಗಿದೆ. ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗುವವರು ಸಚಿವರ ಮನೆಗೆ ಬಂದು ನಮಸ್ಕಾರ ಮಾಡಬೇಕು. ಇದು ಯಾವ ವ್ಯವಸ್ಥೆ? ರಾಜ್ಯಪಾಲರೂ ಸಹ ಇವರ ನಾಮಕರಣವನ್ನು ಏಕೆ ಮಾಡಬೇಕು? ನಮ್ಮಲ್ಲಿ, ಕರ್ನಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿಗಳ ಸ್ಥಾನಕ್ಕೆ ಮೊದಲು ಚುನಾವಣೆಯಾಗುತ್ತಿತ್ತು. ಆದರೆ ಆ ರೀತಿ ಇದ್ದ ವ್ಯವಸ್ಥೆಯನ್ನೂ ತೆಗೆದುಹಾಕಿದ್ದಾರೆ. ಆದ್ದರಿಂದ ಹೊಸದಾಗಿ ಇದನ್ನು ಮಾಡಬೇಕಾಗಿಲ್ಲ. ಹಿಂದೆ ಇದ್ದದನ್ನು ಮಾಡಿ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :— ಈಗ ಸದನವನ್ನು ಮುಂದೂಡಿ ನಾಳೆ ಬೆಳಿಗ್ಗೆ ಹತ್ತು ಗಂಟೆಗೆ ಪುನಹ ಸಮಾವೇಶಗೊಳ್ಳುವುದು.

(ಸಭೆಯು ರಾತ್ರಿ ಏಳು ಗಂಟೆ ಐವತ್ತೈದು ನಿಮಿಷಕ್ಕೆ ಮುಂದೂಡಿಕೆಯಾಗಿ ಪುನಃ 25-11-2000ದ ಬೆಳಿಗ್ಗೆ ಹತ್ತು ಗಂಟೆಗೆ ಸೇರಲು ತೀರ್ಮಾನಿಸಿತು.

+ ಈ ಚಿನ್ಹೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.